**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.**

| **ಸಿ.ಸಿ.ನಂ. 1123/2021** | | | |
|---|---|---|---|
| **ಸಾಕ್ಷಿದಾರರ ಹೆಸರು** | **ಜೆ ಎನ್ ಆನಂದ್ ಕುಮಾರ್** | | |
| **ತಂದೆಃಹೆಸರು** | **ಲೇಟ್ ನಾರಾಯಣಪ್ಪ** | **ಪಿಡಬ್ಲೂ಼** | **4** |
| **ವಯಸ್ಸುಃ** | **53 ವರ್ಷ** | **ಸಿಡಬ್ಲೂ಼** | **14** |
| **ಉದ್ಯೋಗಃ** | **ಸಿ.ಪಿ.ಐ. ಶಿಡ್ಲಘಟ್ಟ** | | |
| **ವಾಸ ಸ್ಥಳಃ** | **ಶಿಡ್ಲಘಟ್ಟ** | | |

**ದಿನಾಂಕಃ 14-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ-**

ದಿನಾಂಕಃ 28.02.2020 ರಿಂದ 26.07.2021 ರವರೆಗೆ ಚಿಂತಾಮಣಿ ನಗರ ಪೊಲಿಸ್ ಠಾಣೆಯಲ್ಲಿ ಆರಕ್ಷಕ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 03.10.2020 ರಂದು ಈ ಪ್ರಕರಣದ ಕಡತವನ್ನು ಚಾಸಾ-13 ರವರಿಂದ ಪಡೆದು ತನಿಖೆಯನ್ನು ಕೈಗೊಂಡಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-4 ರವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಪಂಚನಾವೆಯನ್ನು ಮಾಡಿರುತ್ತೇನೆ. ಪಂಚನಾಮೆ ವೇಳೆಯಲ್ಲಿ ಚಾಸಾ-1 ರವರು ಹಾಜರು ಪಡಿಸಿದ 1 ಲಗ್ನ ಪತ್ರಿಕೆ ಮತ್ತು ತನ್ನ ಮದುವೆ ಕಾಲದಲ್ಲಿ ತೆಗೆದು ಭಾವಚಿತ್ರ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಪಚಂನಾಮೆ ಮೂಲಕ ವಶ ಪಡಿಸಿಕ್ೊಂಡು ಠಾಣಾ ಮುದ್ದೆ ಮಾಲು ಸಂ. 106/2020 ರಲ್ಲಿ ಅಳವಡಿಸಿಕೊಂಡಿರುತ್ತೆನೆ. ಮಾನ್ಯ ನ್ಯಾಯಾಲಯದ ಅನುಮತಿ ಪಡೆದಿರುತ್ತೇನೆ. ಅದೇ ದಿನ ಚಾಸಾ-1 ರವರ ಮರುಹೇಳಿಕೆ

ಯನ್ನು ಚಾಸಾ-8 ರವರಿಂದ ಮದುವೆ ವೇಳೇಯಲ್ಲಿ ತೇಗೇದು ಭಾವಚಿತ್ರಗಳ ಭಾರತೀಯ ಸಾಕ್ಷ ಅಧಿನಿಯಮ 65(ಬಿ)ರಲ್ಲಿ ಪ್ರಮಾಣ ಪತ್ರ ಪಡೆದಿರುತ್ತೇನೆ. ದಿನಾಂಕಃ 04.10.2020 ರಂದು ಚಾಸಾ-2 ರಿಂದ ಚಾಸಾ-7 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 15.10.2020 ರಂದು ಚಾಸಾ-8 ರವರಿಂದ ಹೇಳಿಕೆ ಪಡೆದಿರುತ್ತೇನೆ. ದಿಃ 14.11.2020 ರಂದು ಚಾಸಾ-10 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಈ ಪ್ರಕರಣದ ಆರೋಪಿ ಮಂಜುನಾಥ ರೆಡ್ಡಿ, ನಾಗರಾಜ ರೆಡ್ಡಿ, ರಾಧಮ್ಮ ಎಂಬುವವರು ಮಾನ್ಯ ಜಿಲ್ಲಾ ಸತ್ರ ನ್ಯಾಯಾಲಯದಿಂದ ನೀರಿಕ್ಷಣಾ ಜಾಮೀನು ಪಡೆದು ಹಾಜರು ಪಡಿಸಿದ್ದನ್ನು ನಂತರ ಆರೋಪಿಗಳ ವಿಚಾರಣೆ ಮಾಡಿ ನ್ಯಾಯಾಲಯದ ಆದೇಶದಂತೆ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 30.11.2020 ರಂದು ಚಾಸಾ-1 ರವರು ತೋರಿಸಿದ ಆರೋಪಿಯ ಮನೆಯ ಮಂದೆ ಚಾಸಾ-11 ಮತ್ತು 12 ರವರ ಸಮಕ್ಷಮ ಪಂಚನಾವೆಯನ್ನು ಮಾಡಿರುತ್ತೇನೆ.

ದಿಃ 21.01.2021 ರಂದು ಚಾಸಾ-9 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 04.02.2021 ರಂದು ಚಾಸಾ-1 ರವರು ಠಾಣೆಗೆ ಬಂದು ಹಾಜರು ಪಡಿಸಿದ ತನ್ನ ಮದುವೆ ಕಾಲದಲ್ಲಿ ಖರಿದಿಸಿದಂತಹ ಒಡವೆಗಳ ಬಿಲ್ಲುಗಳನ್ನು ಹಾಜರು ಪಡಿಸಿದ್ದು ಚಾಸಾ-4 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಠಾಣಾ ಮುದ್ದೆ ಮಾಲು ಸಂ. 17/2021 ರಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯದ ಅನುಮತಿ ಪಡೆದಿರುತ್ತೇನೆ. ದಿಃ 05.02.2021 ರಂದು ಪ್ರಕರಣ ತನಿಖೆ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಆರೋಪಿ 1 ರಿಂದ 3 ರವರ ಮೇಲೆ ಸಾಕಷ್ಟು ಸಾಕ್ಷ್ಯಧಾರಗಳು ಲಭ್ಯವಿದ್ದರಿಂದ ದೋಷಾರೋಪಣಾ ಪಟ್ಟಿಯನ್ನು ನೀವೇದಿಸಿಕೊಂಡಿರುತ್ತೇನೆ. ಆರೋಪಿ 1 ರಿಂದ 3 ರವರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಕೃತ್ಯ ನಡೆದ ಪಂಚನಾವೆಯನ್ನು

ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಮತ್ತೊಂದು ಸ್ಥಳ ಪಂಚನಾವೆಯಲ್ಲಿರುವ ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು. ಮಾಲು ಅಮಾನತ್ತು ಪಂಚನಾಮೆಯನ್ನು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ–4(ಬಿ) ಎಂದು ಗುರುತಿಸಲಾಂತು. ನ್ಯಾಯಾಲಯದ ಮುಂದೆ ಇರುವ ಮದುವೆ ಸಮಯದಲ್ಲಿ ತೆಗೆದು ಭಾವಚಿತ್ರಗಳು ಹಾಗೂ ಲಗ್ನ ಪತ್ರಿಕೆಯನ್ನು ಒಡವೆ ಖರೀದಿ ಮಾಡಿರುವ ಬಿಲ್ಲುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಒಟ್ಟಾಗಿ ನಿಪಿ–8 ರಿಂದ ನಿಪಿ–23 ಎಂದು ಗುರುತಿಸಲಾಯಿತು. ದಿಃ 03.10.2020 ರಲ್ಲಿ ಕಲಂ 65(ಬಿ) ಅಡಿಯಲ್ಲಿ ಸ್ವೀಕರಿಸಿಕೊಂಡಿರುವ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ–24 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ–24(ಎ) ಎಂದು ಗುರುತಿಲಾಯಿತು. ಸಾಕ್ಷಿಯು ದೂರನ್ನು ಸ್ವಿಕರಿಕೊಂಡಿದ್ದು ದೇವರಾಜ್ ಸಿ.ಹೆಚ್.ಸಿ.236 ಸದರಿ ವ್ಯಕ್ತಿಯೇ ಪ್ರಥಮ ವರ್ತಮಾನ ವರದಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತಾರೆ. ಸದರಿ ಸಾಕ್ಷಿ ದೋಷಾರೋಪಣಾ ಪಟ್ಟಿ 14 ರಲ್ಲಿ ಸೇರಿಸಿರುವುದಿಲ್ಲ.

**ಪಾಟೀಸವಾಲುಃ ಶ್ರೀ.ಜಿ ಎಂ ಐ ಆರೋಪಿ ಪರ ವಕೀಲರಿಂದಃ–**

ದೂರು ಕೊಟ್ಟ ನಂತರ ಸರ್ವೋಚ್ಚ ನ್ಯಾಯಾಲಯದ ನಿಯಮಾವಳಿ ಅನುಸಾರವಾಗಿ ಪ್ರಕರಣದಲ್ಲಿ ಕರೆಯಿಸಿ ವಿಚಾರಣೆ ಮಾಡಿರುತ್ತೀರಾ ಎಂದರೆ ಮಾಡಿಲ್ಲ. ದೂರು ನೀಡಿರುವುದು ಸುಳ್ಳು ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ–2 ಮತ್ತು 3 ಪೋಲಿಸ್ ಠಾಣೆಯಲ್ಲಿ ಕೂತು ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಹೇಳಿರುವ ರೀತಿ ಯಾವುದೇ ಘಟನೆ ನಡೆದಿಲ್ಲ

ಎಂದರೆ ಸರಿಯಲ್ಲ. ಕೂಲಂಕೂಷವಾಗಿ ಪರೀಶಿಲನೆ ಮಾಡಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**Sd/-**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.